ಮದುವೆ, ಒಂದು ರೀತಿ ಇಬ್ಬರ ಅನುಕೂಲಕ್ಕೆ ಆದ ಮದುವೆ. ನಾನು ಬಡವ ಮತ್ತು ಅನಾಥ. ಲೂಸಿಯ ತಂದೆಗೆ ನನ್ನಂಥವನೇ ಬೇಕಿತ್ತು. ಯಾಕೆಂದರೆ ಲೂಸಿಗೆ ಮಕ್ಕಳಾಗುವಂತಿರಲಿಲ್ಲ. ಅದನ್ನು ಮುಚ್ಚಿಟ್ಟು, ನನಗೆ ಮದುವೆ ಮಾಡಿದ್ದರು. ಇದೇ ನನ್ನ ಮತ್ತು ಲೂಸಿಯ ನಡುವಿನ ಜಗಳಕ್ಕೆ ಕಾರಣ. ಆದರೂ ನಾನು ಅವಳಿಂದ ದೂರ ಹೋಗಿರಲಿಲ್ಲ."

"ಹೋಗುವ ಅವಶ್ಯಕತೆ ಯಾಕಿತ್ತು? ಬೆಂಗಳೂರಿನ ಶ್ರೀಮಂತ ಕಾಲೋನಿಗಳಲ್ಲೊಂದಾದ, ಡೆಲ್ಮೊಂಟೆ ರೆಸಿಡೆನ್ಸಿಯಲ್ಲೊಂದು ಡ್ಯುಪ್ಲೆಕ್ಸ್ ವಿಲ್ಲಾ... ಓಡಾಟಕ್ಕೆ ಕಾರು, ಖರ್ಚಿಗೆ ಹಣ ಎಲ್ಲಾ ಸಿಗುವಾಗ ದೂರ ಯಾಕೆ ಹೋಗುತ್ತಿರಾ?"

ಬಿಜು ಮಾತಾಡಲಿಲ್ಲ.

"ಆ ಹುಡುಗಿ ಯಾರು?"

"ಅವಳ ಹೆಸರು ಸಿಂಥಿಯಾ. ಅವಳನ್ನು ಲೂಸಿಯೇ ಕರೆತಂದಿದ್ದಳು, ಬಾಡಿಗೆ ತಾಯಿಯಾಗಲಿ ಅಂತ. ಆದರೆ ಅವಳಿಂದಲೂ ಸಕ್ಸಸ್ ಸಿಗಲಿಲ್ಲ. ಮೂರು ಬಾರಿ ಐವಿಎಫ್ ಮಾಡಿಸಿದರೂ ಉಪಯೋಗವಾಗಲಿಲ್ಲ. ಅದಾದಮೇಲೆ ಅವಳಿಗೂ ಲೂಸಿಗೂ ದೊಡ್ಡ ಜಗಳವೇ ಆಯಿತು. ಸಿಂಥಿಯಾ ಮತ್ತು ನನ್ನ ಮಧ್ಯೆ ಸಂಬಂಧ ಇದೆ ಎಂದು ಲೂಸಿ ಅವಳಿಗೆ ಎಲ್ಲರೆದುರಿಗೆ ಅವಮಾನ ಮಾಡಿ ಓಡಿಸಿದ್ದಳು. ಆ ಸಮಯದಲ್ಲಿ, ಆ ಸಿಟ್ಟಿನಲ್ಲಿ ನಾನು ಲೂಸಿಯನ್ನು ಕೊಂದುಬಿಡುತ್ತೇನೆ ಎಂದು ಕೂಗಾಡಿದ್ದೆ, ಅಷ್ಟೇ."

"ಅಂದರೆ ನಿಮ್ಮ ಮಧ್ಯೆ ಏನೂ ಇರಲಿಲ್ಲವಾ?"

"ನಾನು ಮತ್ತು ಸಿಂಥಿಯಾ ಭಾವನಾತ್ಮಕವಾಗಿ ಒಂದಾಗಿದ್ದೆವು. ಅವಳಿಗೆ ನನ್ನ ಮೇಲೆ ಪ್ರೀತಿಗಿಂತಾ, ಕರುಣೆ ಇತ್ತು. ಲೂಸಿ ಅದನ್ನೇ ತಪ್ಪು ತಿಳಿದಳು. ಅದೆಲ್ಲಾ ಹಳೆಯ ಕತೆ. ಎಲ್ಲಾ ಮರೆತು ನಾನು ಲೂಸಿ ಚರ್ಚ್‌ನಲ್ಲಿ ಫಾದರ್ ಎದುರಿನಲ್ಲಿ ಮತ್ತೊಮ್ಮೆ ವಚನಬದ್ಧರಾಗಿ, ಮತ್ತೆ ಹೊಂದಾಣಿಕೆ ಮಾಡಿಕೊಂಡಿದ್ದೆವು."

ಅವನ ಮಾತುಗಳನ್ನು ತಡೆಯುತ್ತಾ ಡಿಮೆಲೋ, "ಸರ್, ಮೊದಲು ಲೂಸಿಯ ಸಾವು ಕೊಲೆ ಅಂತ ಹೇಗೆ ಹೇಳ್ತೀರಾ? ನೀವೇ ಹೇಳಿದ ಹಾಗೆ ಒಳಗಡೆಯಿಂದ ಎಲ್ಲಾ ಬಾಗಿಲುಗಳೂ ಹಾಕಿದ್ದವು, ಚಿಲಕಗಳೂ ಹಾಕಿದ್ದವು. ನೀವು ಆರೋಪ ಹೊರಿಸುತ್ತಿರುವ ಬಿಜು, ಆ ಸಮಯದಲ್ಲಿ ನೂರಾರು ಕಿ.ಮೀ. ದೂರದಲ್ಲಿದ್ದ. ಅವನು ಹೇಗೆ ಕತ್ತು ಬಿಗಿದು ಸಾಯಿಸಿರಲು ಸಾಧ್ಯ? ಆ ಲೂಸಿಯೇ, ತನ್ನ ಸಾವಿನಿಂದ ಈ ಬಿಜುವಿಗೆ ಒಂದು ಪಾಠ ಕಲಿಸುತ್ತೇನೆ ಅಂತ, ನಿಮಗೆಲ್ಲಾ ಅನುಮಾನ ಬರುವ ವಾತಾವರಣ ಸೃಷ್ಟಿಸಿ, ತಾನೇ ಆತ್ಮಹತ್ಯೆ ಯಾಕೆ ಮಾಡಿಕೊಂಡಿರಬಾರದು? ಮೊದಲು ಅವಳ ಸಾವು ಆತ್ಮಹತ್ಯೆಯೋ, ಕೊಲೆಯೋ ಅಂತ ತಿಳಿದುಕೊಳ್ಳಿ. ಆಮೇಲೆ ಆರೋಪ ಹೊರಿಸುವಿರಂತೆ."

ಬಿಜು ಅವನನ್ನು ಸುಮ್ಮನಾಗಿಸಲು ನೋಡಿದ. ಅವನನ್ನು ತಡೆಯುತ್ತಾ, "ನಿನಗೆ ಗೊತ್ತಿಲ್ಲ ಬಿಜು, ಸ್ವಲ್ಪ ಯಾಮಾರಿದರೂ ಇವರು ನಿನ್ನನ್ನೇ ಕೊಲೆಗಾರ ಅಂತ ಬಿಂಬಿಸಿ, ಕೋರ್ಟ್‌ಗೆ ಒಪ್ಪಿಸಿಬಿಡುತ್ತಾರೆ. ಅಲ್ಲಿ ಅವರು ನಿನ್ನನ್ನು ಅಪರಾಧಿ ಅಂತ ಸಾಬೀತು ಮಾಡುವುದಕ್ಕಿಂತ, ನಿನ್ನನ್ನು ನೀನು ನಿರಪರಾಧಿ ಎಂದು ಸಾಬೀತು ಮಾಡಿಕೊಳ್ಳುವ ಜವಾಬ್ದಾರಿ ಹೆಚ್ಚಿರುತ್ತದೆ. ಕೇಸ್ ಸೋತರೆ ಅವರಿಗೇನೂ ನಷ್ಟವಿಲ್ಲ, ಆದರೆ ನಿನಗೆ ವರ್ಷಾನುಗಟ್ಟಲೆ ಕೋರ್ಟಿಗೆ ಅಲೆದಾಟ, ಲಾಯರ್‌ಗಳ ಒಡನಾಟ, ಇವೆಲ್ಲಾ ನಿನ್ನ ಇಡೀ ಜೀವನವನ್ನೇ ನುಂಗಿ ಹಾಕುತ್ತವೆ''. ಅವನ ಯಾವ ಮಾತುಗಳನ್ನೂ ರುದ್ರೇಶ್ ಕೇಳಿಸಿಕೊಳ್ಳುತ್ತಿರಲಿಲ್ಲ. ಅನುಮಾನದ ಸುಳಿಯೊಂದು ಅವನ ತಲೆಗೆ ಹೊಕ್ಕಿತ್ತು– 'ಇದು ಆತ್ಮಹತ್ಯೆಯೇ ಅಥವಾ ಕೊಲೆಯೇ?'

★★★